ESTD. 1974 RBI LICENCE NO. UBD KAN 1444P/1997

# ದೈವಜ್ಞ ಸಹಕಾರ ಬ್ಯಾಂಕ ನಿಯಮಿತ, ಬೆಳಗಾವಿ.

ಮುಖ್ಯ ಕಛೇರಿ: 1169, ಸರಾಫ ಗಲ್ಲಿ, ಶಹಾಪೂರ, ಬೆಳಗಾವಿ.
ತಾ: ಬೆಳಗಾವಿ, ಜಿಲ್ಲೆ: ಬೆಳಗಾವಿ, ದೂರವಾಣಿ: (0831) 2488499, 2487501.

Ref No: ಆರ್‌ಸಿಎಸ್/ಯುಬಿಸಿ–7/ಸಿ.ನೇ.ಪ್ರ/03/2026–27 Date: 23 Apr. 2026.

## ಸಿಬ್ಬಂದಿ ನೇಮಕಾತಿ ಅಧಿಸೂಚನೆ

ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು, ಅವರ ಆದೇಶ ಸಂಖ್ಯೆ: ಆರ್‌ಸಿಎಸ್/ಯುಬಿಸಿ–7/ಸಿ.ನೇ.ಪ್ರ/03/2026–27 ದಿನಾಂಕ: 23.04.2026 ರನ್ವಯ ಅನುಮತಿ ಪಡೆದ ಈ ಕೆಳಗಿನ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

| ಅ.ನಂ | ಹುದ್ದೆಗಳ ಹೆಸರು | ಒಟ್ಟು ಹುದ್ದೆ | ವಿದ್ಯಾರ್ಹತೆ ಮತ್ತು ಇತರೆ ಅರ್ಹತೆಗಳು | ವೇತನ ಶ್ರೇಣಿ |
|---|---|---|---|---|
| 1 | ಸಹಾಯಕ ಪ್ರಧಾನ ವ್ಯವಸ್ಥಾಪಕರು | 1 | 1) ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ವಿಶ್ವವಿದ್ಯಾನಿಲಯದ ಪದವಿಯಲ್ಲಿ ಉತ್ತೀರ್ಣರಾಗಿರಬೇಕು.<br>2) ಎಸ್.ಎಸ್.ಎಲ್.ಸಿ ಅಥವಾ ಇದಕ್ಕೆ ಸರಿ ಸಮನಾದ ಪರೀಕ್ಷೆಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.<br>3) ಕಂಪ್ಯೂಟರ ಜ್ಞಾನ ಕಡ್ಡಾಯವಾಗಿ ಹೊಂದಿರಬೇಕು.<br>4) ಬಿ.ಕಾಂ, ಬಿ.ಸಿ.ಎ, ಬಿ.ಇ (ಸಿ.ಎಸ್), ಎಮ್.ಸಿ.ಎ, ಎಮ್.ಕಾಂ, ಎಮ್.ಬಿ.ಎ, ಸಿ.ಎ, ಸಿ.ಎಸ್ ವಿದ್ಯಾರ್ಹತೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.<br>5) ಡಿಪ್ಲೋಮಾ ಅಥವಾ ಹೈಯರ ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜಮೆಂಟ್ ಕೋರ್ಸಿನಲ್ಲಿ ಉತ್ತೀರ್ಣರಾದವರಿಗೆ ಅಥವಾ ಬ್ಯಾಂಕಿಂಗ್ ಕ್ಷೇತ್ರದಲ್ಲಿ/ ಇತರೆ ಆರ್ಥಿಕ ಸಂಸ್ಥೆಗಳಲ್ಲಿ ಎರಡು (2) ವರ್ಷ ಸೇವೆ ಸಲ್ಲಿಸಿದ ಅನುಭವ ಹೊಂದಿರವರಿಗೆ ಆದ್ಯತೆ ನೀಡಲಾಗುವುದು. | 40900–1100–46400–1250–53900–1450–62600–1650–72500–1900–78200 |
| 2 | ಕಿರಿಯ ಸಹಾಯಕರು | 13 | 1) ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ವಿಶ್ವವಿದ್ಯಾನಿಲಯದ ಪದವಿಯಲ್ಲಿ ಉತ್ತೀರ್ಣರಾಗಿರಬೇಕು.<br>2) ಎಸ್.ಎಸ್.ಎಲ್.ಸಿ ಅಥವಾ ಇದಕ್ಕೆ ಸರಿ ಸಮನಾದ ಪರೀಕ್ಷೆಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.<br>3) ಕಂಪ್ಯೂಟರ ಜ್ಞಾನ ಕಡ್ಡಾಯವಾಗಿ ಹೊಂದಿರಬೇಕು<br>4) ಬಿ.ಕಾಂ, ಬಿ.ಸಿ.ಎ, ಬಿ.ಇ (ಸಿ.ಎಸ್) ಎಮ್.ಸಿ.ಎ, ಎಮ್.ಕಾಂ, ಎಮ್.ಬಿ.ಎ, ವಿದ್ಯಾರ್ಹತೆಗೆ ಆದ್ಯತೆ ನೀಡಲಾಗುವುದು.<br>5) ಡಿಪ್ಲೋಮಾ ಅಥವಾ ಹೈಯರ ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜಮೆಂಟ್ ಕೋರ್ಸಿನಲ್ಲಿ ತರಬೇತಿ ಪಡೆದವರಿಗೆ ಆದ್ಯತೆ ನೀಡಲಾಗುವುದು.<br>6) ಬ್ಯಾಂಕ ಅಥವಾ ಇತರೆ ಆರ್ಥಿಕ ಸಂಸ್ಥೆಗಳಲ್ಲಿ ಸೇವಾನುಭವ ಹಾಗೂ ಕನ್ನಡ ಭಾಷೆಯ ಜೊತೆಗೆ ಇಂಗ್ಲೀಷ, ಹಿಂದಿ ಭಾಷಾಜ್ಞಾನ ಹೊಂದಿದವರಿಗೆ ಆದ್ಯತೆ. | 21400–500–22400–550–24600–600–27000–650–29600–750–32600–850–36000–950–39800–1100–42000 |
| 3 | ಸಿಪಾಯಿ | 1 | 1) ಎಸ್.ಎಸ್.ಎಲ್.ಸಿ ಅಥವಾ ಇದಕ್ಕೆ ಸರಿ ಸಮನಾದ ಪರೀಕ್ಷೆಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.<br>2) ಪಿ.ಯು.ಸಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. | 17000–400–18600–450–20400–500–22400–550–24600–600–27000–650–28950 |

ಮೇಲ್ಕಾಣಿಸಿದ ವೇತನ ಶ್ರೇಣಿಗಳೊಂದಿಗೆ ಬ್ಯಾಂಕಿನಲ್ಲಿ ಕಾಲಕಾಲಕ್ಕೆ ಅನ್ವಯಿಸುವ ತುಟ್ಟಿಭತ್ಯೆ ಹಾಗೂ ಇತರೆ ಭತ್ಯೆಗಳನ್ನು ನೀಡಲಾಗುವುದು.

1) ವಯೋಮಿತಿ: ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳಾಗಿರಬೇಕು ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ರೀತಿ ಈ ಕೆಳಕಂಡ ಗರಿಷ್ಠ ವಯೋಮಿತಿಯೊಳಗಿರಬೇಕು.

| | | |
|---|---|---|
| ಅ) | ಯಾವುದೇ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಹಾಗೂ ಹಿಂದುಳಿದ ಪ್ರವರ್ಗ–1 | 40 ವರ್ಷಗಳು |
| ಬ) | ಇತರೆ ಹಿಂದುಳಿದ ವರ್ಗಕ್ಕೆ ಸೇರಿದವರು ( ಅಂದರೆ ಪ್ರವರ್ಗ–2ಎ, 2ಬಿ, 3ಎ ಹಾಗೂ 3ಬಿ) | 38 ವರ್ಷಗಳು |
| ಕ) | ಸಾಮಾನ್ಯ ವರ್ಗ | 35 ವರ್ಷಗಳು |

**ಸೂಚನೆ: ಘನ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ/262/ಸೇನೆನಿ/2025 ದಿನಾಂಕ 29.01.2026 ಪ್ರಕಾರ ಎಲ್ಲ ವರ್ಗದ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ 5 ವರ್ಷಗಳ ವಿನಾಯಿತಿಯನ್ನು ನೀಡಲಾಗಿದೆ.**

2) **ಅರ್ಜಿ ಫಾರ್ಮ:** ಬ್ಯಾಂಕಿನ ಮುಖ್ಯ ಕಛೇರಿ, ಮೊದಲನೇ ಮಹಡಿ, 1169, ಸರಾಫ ಗಲ್ಲಿ, ಶಹಾಪೂರ, ಬೆಳಗಾವಿ, ಧಾರವಾಡ ಹಾಗೂ ಕಾರವಾರ ಶಾಖೆಯಲ್ಲಿ ದಿನಾಂಕ : **04–06–2026** ರಿಂದ ರೂ.50/– ಫೀ ಪಾವತಿಸಿ ಅರ್ಜಿಯನ್ನು ಬ್ಯಾಂಕಿನ ಕೆಲಸದ ದಿನದಂದು ಬೆಳಿಗ್ಗೆ 11.00 ರಿಂದ ಸಂಜೆ 05.00 ಗಂಟೆಯವರೆಗೆ ಪಡೆಯತಕ್ಕದ್ದು.

3) **ಅರ್ಜಿ ಶುಲ್ಕ:** ಸಾಮಾನ್ಯ ಅಭ್ಯರ್ಥಿಗಳಿಗೆ ರೂ.500/– + GST (ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಪ್ರವರ್ಗ–1 ಹಾಗೂ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಲ್ಲಿ 50% ರಿಯಾಯಿತಿ ಇರುತ್ತದೆ.
ಅರ್ಜಿ ಶುಲ್ಕದ ಮೊತ್ತವನ್ನು ಡಿಮಾಂಡ ಡ್ರಾಫ್ಟ / ಬ್ಯಾಂಕರ್ಸ ಚೆಕನ್ನು **ದೈವಜ್ಞ ಸಹಕಾರ ಬ್ಯಾಂಕ ನಿಯಮಿತ, ಬೆಳಗಾವಿ** ಈ ಹೆಸರಿನಲ್ಲಿ ತೆಗೆಯತಕ್ಕದ್ದು. ಶುಲ್ಕವನ್ನು ಯಾವುದೇ ಕಾರಣಕ್ಕೂ ಮರಳಿಸಲಾಗುವುದಿಲ್ಲ.

4) **ಅರ್ಜಿ ಸಲ್ಲಿಸುವ ವಿಧಾನ:**

ಅ) ಬ್ಯಾಂಕಿನಿಂದ ಪೂರೈಸಿದ ಮೂಲ ಅರ್ಜಿಯನ್ನು ಸ್ವ–ಹಸ್ತಾಕ್ಷರದಲ್ಲಿ ಭರ್ತಿ ಮಾಡಿ, ಇತ್ತೀಚಿನ ಪಾಸ್ ಪೋರ್ಟ ಅಳತೆಯ ಭಾವಚಿತ್ರವನ್ನು ಅಂಟಿಸಿ, ಹೆಚ್ಚುವರಿ ಎರಡು (2) ಭಾವಚಿತ್ರಗಳನ್ನು ಸಲ್ಲಿಸತಕ್ಕದ್ದು.

ಆ) ವಯಸ್ಸು ದೃಡಿಕರಣ ಕುರಿತು ಎಸ್.ಎಸ್.ಎಲ್.ಸಿ / 10 ನೇ ತರಗತಿ ಅಂಕ ಪಟ್ಟಿ ಪ್ರಮಾಣ ಪತ್ರ ಅಥವಾ ವರ್ಗಾವಣೆ ಪ್ರಮಾಣ ಪತ್ರ (TC) ದಾಖಲಾತಿಯನ್ನು ಸಲ್ಲಿಸತಕ್ಕದ್ದು ಹಾಗೂ ಹುದ್ದೆವಾರು ನಿಗದಿಪಡಿಸಿದ ವಿದ್ಯಾರ್ಹತೆಯ ಪ್ರಮಾಣಪತ್ರ ಮತ್ತು ಅಂಕ ಪಟ್ಟಿಯ ದಾಖಲಾತಿಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಡಿಕರಿಸಿ ಅರ್ಜಿಯ ಜೊತೆಗೆ ಸಲ್ಲಿಸತಕ್ಕದ್ದು.

ಇ) ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಹಿಂದುಳಿದ ಪ್ರವರ್ಗ–1 ಹಾಗೂ ಇತರೆ ಹಿಂದುಳಿದ ವರ್ಗಗಳ ಅರ್ಜಿದಾರರು ಅವಧಿಯೊಳಗಿನ ಚಾಲ್ತಿಯಲ್ಲಿರುವ ದೃಡಿಕೃತ ಜಾತಿ ಪ್ರಮಾಣ ಪತ್ರ ಲಗತ್ತಿಸತಕ್ಕದ್ದು.

5) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸರಿಯಾಗಿ ಭರ್ತಿ ಮಾಡಿದ/ ಪೂರ್ಣಗೊಳಿಸಿದ ಅರ್ಜಿಗಳನ್ನು ಎಲ್ಲಾ ದಾಖಲಾತಿಗಳೊಂದಿಗೆ ದಿನಾಂಕ **24–06–2026 ಸಂಜೆ 05.00** ಘಂಟೆಯ ಒಳಗಾಗಿ ಪ್ರಧಾನ ವ್ಯವಸ್ಥಾಪಕರು ಸಿಬ್ಬಂದಿ ನೇಮಕಾತಿ ಸಮಿತಿ, ದೈವಜ್ಞ ಸಹಕಾರ ಬ್ಯಾಂಕ ನಿಯಮಿತ, ಬೆಳಗಾವಿ, 1169, ಸರಾಫ ಗಲ್ಲಿ, ಶಹಾಪೂರ, ಬೆಳಗಾವಿ ಇಲ್ಲಿಗೆ ಸಲ್ಲಿಸಬೇಕು.

6) **ಇತರೆ ಸೂಚನೆಗಳು ಮತ್ತು ಷರತ್ತುಗಳು:**

ಅ) ಸಹಾಯಕ ಪ್ರಧಾನ ವ್ಯವಸ್ಥಾಪಕ, ಹಾಗೂ ಕಿರಿಯ ಸಹಾಯಕರ ಹುದ್ದೆಗಳ ನೇಮಕಾತಿಗಾಗಿ ಲಿಖಿತ ಪರೀಕ್ಷೆಯನ್ನು ಜರುಗಿಸಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳ ಶೇಕಡಾವಾರು ಆಧಾರದ ಮೇಲೆ 1:5 ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.

ಆ) ಸಿಪಾಯಿ ಹುದ್ದೆಯ ನೇಮಕಾತಿಗಾಗಿ ಸಂದರ್ಶನ ಜರುಗಿಸಲಾಗುವುದು. ಹುದ್ದೆಗೆ ನಿರ್ದಿಷ್ಟಪಡಿಸಿದ ವಿದ್ಯಾರ್ಹತೆಯಲ್ಲಿ ಪಡೆದುಕೊಂಡ ಪ್ರತಿಶತ ಅಂಕಗಳ ಆಧಾರದ ಮೇಲೆ 1:5 ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.

ಇ) ನೇಮಕಾತಿ ನಿಯಮಗಳ ಪ್ರಕಾರ ಅರ್ಹ ಅಭ್ಯರ್ಥಿಗಳನ್ನು ಮಾತ್ರ ಲಿಖಿತ ಪರೀಕ್ಷೆ ಅಥವಾ ಸಂದರ್ಶನಕ್ಕೆ ಕರೆಯಲಾಗುವದು.

ಈ) 200 ಅಂಕಗಳ ಲಿಖಿತ ಪರೀಕ್ಷೆಯಿದ್ದು, ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಇಂಗ್ಲಿಷಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರ ವಿಷಯಗಳಿಗಾಗಿ 50 ಅಂಕಗಳು, ಭಾರತದ ಸಂವಿಧಾನಕ್ಕಾಗಿ 25 ಅಂಕಗಳು ಹಾಗೂ ಬ್ಯಾಂಕಿನ ಚಟುವಟಿಕೆಗಳು ಮತ್ತು ವಸ್ತು ನಿಷ್ಠ ವಿಷಯ ವಸ್ತುಗಳಿಗೆ 25 ಅಂಕಗಳು ಒಳಗೊಂಡಿರುತ್ತದೆ.

ಉ) ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಲಿಖಿತ ಪರೀಕ್ಷೆ / ಸಂದರ್ಶನಕ್ಕೆ ಹಾಜರಾಗತಕ್ಕದ್ದು.

ಋ) ಅಪೂರ್ಣ, ಸ್ಪಷ್ಟವಾಗಿ ಬರೆಯದ, ಸಹಿ ಮಾಡದೇ ಇರುವ, ಶುಲ್ಕವನ್ನು ಪಾವತಿಸದ, ಅವಶ್ಯಕ ಧೃಢಿಕೃತ ದಾಖಲಾತಿಗಳನ್ನು ಲಗತ್ತಿಸದ ಹಾಗೂ ಎಲ್ಲಾ ದಾಖಲಾತಿಗಳನ್ನು ಧೃಢಿಕರಿಸದೇ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಿದ ಅವಧಿಯ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಎ) ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಕಾರಣವನ್ನು ನೀಡದೆ ಮುಂದೂಡುವ, ರದ್ದುಪಡಿಸುವ ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ನೇಮಕಾತಿ ಸಮಿತಿ ಕಾಯ್ದಿರಿಸಿಕೊಂಡಿದೆ.

ಏ) ಅರ್ಹತೆ ಹೊಂದಲು ವಿಫಲವಾದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಗೆ/ ಸಂದರ್ಶನಕ್ಕೆ ಕರೆ ಅಥವಾ ಸೂಚನೆ ನೀಡಲಾಗುವುದಿಲ್ಲ. ಅನರ್ಹತೆ ಹೊಂದಿದ ಅಭ್ಯರ್ಥಿಗಳ ಜೊತೆ ಈ ಕುರಿತು ಯಾವುದೇ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.

ಐ) ವಿವಾಹಿತ ಮಹಿಳಾ ಅರ್ಜಿದಾರರು ಶೈಕ್ಷಣಿಕ ಅರ್ಹತಾ ಪ್ರಮಾಣಪತ್ರಗಳ ಪ್ರಕಾರ ಅರ್ಜಿಯಲ್ಲಿ ತಮ್ಮ ವಿವರಗಳನ್ನು (ಪೂರ್ಣ ಹೆಸರು, ವಿಳಾಸ, ಇತ್ಯಾದಿ) ಭರ್ತಿ ಮಾಡಬೇಕು ಮತ್ತು ವಿವಾಹ ಪ್ರಮಾಣಪತ್ರವನ್ನು ಸಹ ಲಗತ್ತಿಸಬೇಕು.

ಒ) ಹೆಚ್ಚಿನ ಮಾಹಿತಿಗೆ ಬ್ಯಾಂಕಿನ ಮುಖ್ಯ ಕಛೇರಿಗೆ ಸಂಪರ್ಕಿಸತಕ್ಕದ್ದು.

ಸ್ಥಳ: ಬೆಳಗಾವಿ
ದಿನಾಂಕ: 03–06–2026

ಸಹಿ/– ಪ್ರಧಾನ ವ್ಯವಸ್ಥಾಪಕರು / ಸದಸ್ಯ ಕಾರ್ಯದರ್ಶಿ
ನೇಮಕಾತಿ ಸಮಿತಿ **ದೈವಜ್ಞ ಸಹಕಾರ ಬ್ಯಾಂಕ ನಿಯಮಿತ,ಬೆಳಗಾವಿ**